**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ.**
**ನೃಪತುಂಗ ರಸ್ತೆ. ಬೆಂಗಳೂರು – 5600-01**

ಸಂಖ್ಯೆ : ಸಶಿಅ/ಚಿಕದ/2010-11

ದಿನಾಂಕ :26.5.2010

**ಸುತ್ತೋಲೆ**

**ವಿಷಯ: 2010-11ನೇ ಸಾಲಿನ ಚಿಣ್ಣರ ಜಿಲ್ಲಾ ದರ್ಶನ ಕುರಿತಂತೆ ಮಾರ್ಗಸೂಚಿ.**

ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿನ ಮಕ್ಕಳ ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿ, ಒಂದು ಪ್ರಮುಖ ಗುರಿಯಾಗಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ವ ಹಾಗೂ ಹೆಣ್ಣು ಮಕ್ಕಳಿಗಾಗಿ 'ಚಿಣ್ಣರ ವ್ಯಕ್ತಿತ್ವ ವಿಕಸನ-ಕರ್ನಾಟಕ ಪರಿಚಯ' ಎಂಬ ಶೈಕ್ಷಣಿಕ ಪ್ರವಾಸವನ್ನು 2004-05 ಹಾಗೂ 2006-07, 2007-08 ಹಾಗೂ 2008-09 ನೇಸಾಲಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 2009-10 ನೇ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಸದರಿ ಚಟುವಟಿಕೆಯ ಫಲಾನುಭವಿಗಳನ್ನಾಗಿಸಲು ಹಾಗೂ ತಮ್ಮ ಜಿಲ್ಲೆಯನ್ನು ಸಮಗ್ರವಾಗಿ ಅರಿಯುವ ನಿಟ್ಟಿನಲ್ಲಿ 4 ದಿನದ "**ಚಿಣ್ಣರ ಕರ್ನಾಟಕ ದರ್ಶನದ**" ಬದಲಿಗೆ 2 ದಿನದ "**ಚಿಣ್ಣರ ಜಿಲ್ಲಾ ದರ್ಶನ**" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿತ್ತು. 2009-10 ನೇ ಸಾಲಿನಲ್ಲಿ ಪ್ರವಾಸ ಮಾಡಿದ ಮಕ್ಕಳನ್ನು ಹೊರತು ಪಡಿಸಿ ಇತರೆ ಮಕ್ಕಳನ್ನು ಈ ಚಟುವಟಿಕೆಗೆ ಒಳಪಡಿಸುವುದು.

ಚಿಣ್ಣರ ಜಿಲ್ಲಾ ದರ್ಶನದ ಸಾಮಾನ್ಯ ಉದ್ದೇಶಗಳು :-

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ಜಿಲ್ಲೆಯ ಮುಖ್ಯವಾದ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.
- ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು.
- ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು.
- ತಮ್ಮ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ತಮ್ಮ ಜಿಲ್ಲೆಯ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವುಂಟು ಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು, ಹೊರಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ತಮ್ಮ ಜಿಲ್ಲೆಯ ಐತಿಹಾಸಿಕ ವಿಷಯಗಳ ನೈಜ ಸ್ಥಿತಿಯ ದರ್ಶನ ಮಾಡಿಸುವುದು.
- ಪ್ರಾದೇಶಿಕ ಮಟ್ಟದ ಜನಜೀವನ, ಭಾಷೆ, ಆಚಾರವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟು ಮಾಡುವುದು.

**ನಿರ್ದಿಷ್ಟ ಉದ್ದೇಶಗಳು :-**

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವುದು.
- ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹಾಗೂ ಹೆಣ್ಣು ಮಕ್ಕಳು ತಮ್ಮ ಜಿಲ್ಲೆಯ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.

- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ಸೆಮಿಸ್ಟರ್ ಪದ್ಧತಿಯ ಗುಂಪು ಚಟುವಟಿಕೆ ಹಾಗೂ ವೈಯುಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.
- ನೋಡಿ ಕಲಿಯುವುದರಿಂದ ಅನೇಕ ಪರಿಕಲ್ಪನೆಗಳು ಸ್ಪಷ್ಟವಾಗುವುದು.

ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಮಕ್ಕಳ ದಾಖಲಾತಿ, ಹಾಜರಾತಿ ಉತ್ತಮವಾಗುತ್ತದೆ. ಒಟ್ಟಾರೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಎಲ್ಲಾ ಮಕ್ಕಳಲ್ಲಿ ಉತ್ಸಾಹ ತುಂಬುವುದಾಗಿದೆ. ಯೋಜನೆಯ ಲಾಭವು ನೇರವಾಗಿ ಮಕ್ಕಳಿಗೆ ತಲುಪುವುದರಿಂದ ಔಚಿತ್ಯಪೂರ್ಣವಾಗಿದ್ದು, ಪೋಷಕರು ಹಾಗೂ ಸಮುದಾಯದ ಸಹಕಾರವನ್ನು ಸಹಗಳಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟು ಒಮ್ಮತದಿಂದ ಈ ಕಾರ್ಯಕ್ರಮವನ್ನು ಅನುಮೋದಿಸಲಾಗಿದೆ.

1. **ಯೋಜನೆಯ ಆಯವ್ಯಯ**

2010-11ನೇ ಸಾಲಿನ ಜಿಲ್ಲೆಗಳ ಸರ್ವ ಶಿಕ್ಷಣ ಅಭಿಯಾನದ ಂಫಾಕಿ&ಃ ಯಲ್ಲಿನ 'Innovative Activity for SC/ST' ಚಟುವಟಿಕೆಯಡಿಯಲ್ಲಿ ಪ್ರತಿ ಜಿಲ್ಲೆಗೆ ರೂ.15ಲಕ್ಷಗಳು ಅನುಮೋದನೆಯಾಗಿರುತ್ತದೆ.

ಒಟ್ಟಾರೆ ರಾಜ್ಯಕ್ಕೆ ರೂ. 450 ಲಕ್ಷಗಳು. ಇದನ್ನು ವಲಯವಾರು ಮರು ಹೊಂದಾಣಿಕೆ ಮಾಡಲಾಗುತ್ತದೆ. ಪ್ರತಿ 50 ಮಕ್ಕಳು ಹಾಗೂ 4 ಶಿಕ್ಷಕರನ್ನು ಒಳಗೊಂಡ ತಂಡಕ್ಕೆ ಸೀಮಿತ ಅನುದಾನ : 25,000. ವಲಯವಾರು ಕನಿಷ್ಠ 8 ತಂಡಗಳ ಪ್ರವಾಸ ಹಮ್ಮಿಕೊಳ್ಳುವುದು. ಒಟ್ಟು 202 ವಲಯಗಳಿಂದ 1616 ತಂಡಗಳು ಪ್ರವಾಸಕ್ಕೆ ಒಳಪಡುವುವು. ಹಾಗೂ ಹೆಚ್ಚುವರಿಯಾಗಿ ಈ ಕೆಳಕಂಡ ವಲಯಗಳಲ್ಲಿ ಎಸ್.ಸಿ./ಎಸ್.ಟಿ ಮಕ್ಕಳ ದಾಖಲಾತಿ(ಡೈಸ್2008) ಹೆಚ್ಚಿರುವ ಹಿನ್ನೆಲೆಯಲ್ಲಿ ಅಂತಹ ಈ ಕೆಳಗಿನ ಹೆಚ್ಚುವರಿ ಪ್ರತಿ ವಲಯದಿಂದ 3 ತಂಡಗಳಲ್ಲಿ ಪ್ರವಾಸ ಆಯೋಜಿಸುವುದು. 3 ತಂಡಗಳ ಪ್ರವಾಸವನ್ನು ಶೈಕ್ಷಣಿಕ ವಲಯಗಳಾದ ಬಳ್ಳಾರಿ ಪೂರ್ವ, ಬಳ್ಳಾರಿ ಪಶ್ಚಿಮ, ಹೊಸಪೇಟೆ, ಕೂಡ್ಲಗಿ, ಸಂಡೂರು, ಔರಾದ, ಬಸವಕಲ್ಯಾಣ, ಹಮ್ನಾಬಾದ್, ಬಿಜಾಪುರ ಗ್ರಾಮೀಣ, ಸಿಂಧಗಿ, ಚಿಂತಾಮಣಿ, ಗೌರಿಬಿದನೂರು, ಹುಕ್ಕೇರಿ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮೂರು, ಚನ್ನಗಿರಿ, ಆಳಂದ, ಚಿತ್ತಾಪುರ, ಕೋಲಾರ, ಗಂಗಾವತಿ, ಕೊಪ್ಪಳ, ಪಾವಗಡ, ಸಿರಾ, ಹೆಚ್.ಡಿ.ಕೋಟೆ, ಮೈಸೂರು ಗ್ರಾಮಾಂತರ, ನಂಜನಗೂಡು, ಟಿ.ಎನ್.ಪುರ, ದೇವದುರ್ಗ, ಲಿಂಗಸುಗೂರು, ಮಾನ್ವಿ, ರಾಯಚೂರು, ಸಿಂಧನೂರು, ತುಮಕೂರು, ಶಹಪೂರ, ಶೋರಾಪುರ ಮತ್ತು ಯಾದಗಿರಿ ಯಲ್ಲಿ ಆಯೋಜಿಸುವುದು.

ಒಟ್ಟಾರೆ 2010-11ನೇ ಸಾಲಿನಲ್ಲಿ 1730 ತಂಡಗಳ ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಅನುಷ್ಠಾನಗೊಳಿಸುವುದು. ಇದಲ್ಲದೆ ಈ ಚಟುವಟಿಕೆ ಅಡಿಯಲ್ಲಿ ರೂ. 13 ಲಕ್ಷವನ್ನು ಮುಂದಿನ ಹೊರಡುವ ಸೂಚನೆಯಂತೆ ಪ್ರಾಯೋಗಿಕವಾಗಿ ಪ್ರತಿಭಾನ್ವಿತ ಪ.ಜಾ ಮತ್ತು ಪ.ವ ದ ಮಕ್ಕಳಿಗೆ ಸಾಹಸ ಪ್ರೌವೃತ್ತಿಯನ್ನು ಬೆಳಸುವಂತಹ ಶಿಬಿರಗಳನ್ನು ಆಯೋಜಿಸಲು ಬಳಸಲಾಗುವುದು. ಹಾಗೂ ರಾಜ್ಯ ಹಂತದಲ್ಲಿ 3 ಲಕ್ಷ ಅನುದಾನದಲ್ಲಿ ಈ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಉದ್ಘಾಟನಾ ಸಮಾರಂಭ ಇತ್ಯಾದಿ ವೆಚ್ಚಗಳಿಗೆ ಬಳಸಲಾಗುವುದು.

***ಘಟಕವೆಚ್ಚದ ವಿವರ:***

ರೂ. 25,000/- ಅನುದಾನದ ಚಟುವಟಿಕೆವಾರು ವಿವರ ಈ ಕೆಳಕಂಡಂತೆ ಇರುತ್ತದೆ.

- ಕೆ.ಎಸ್.ಆರ್.ಟಿ.ಸಿ ಬಸ್ ಟ್ರಾನ್ಸಪೋರ್ಟೇಷನ್ ವೆಚ್ಚ (ಅಂದಾಜು ದೂರ 600 ಕಿ.ಮೀ ಗೆ 22 ರೂ.ನಂತೆ 55 ಸೀಟರ್ ಬಸ್, 2 ದಿನಗಳಿಗೆ – ಅಂದಾಜು ಅನುದಾನ ರೂ. 13,200/-
- ಊಟ 56 ಜನರಿಗೆ (50 ಮಕ್ಕಳು ಹಾಗೂ 4 ಶಿಕ್ಷಕರು+ ಒಬ್ಬರು ಬಿ.ಆರ್.ಪಿ/ಸಿ.ಆರ್.ಪಿ+ಚಾಲಕ) – 2 ದಿನಗಳಿಗೆ- ಅಂದಾಜು ಅನುದಾನ ರೂ. 6000/-
- ಒಂದು ರಾತ್ರಿಯ ಉಳಿಯುವಿಕೆಗೆ ( ಡಾರ್ಮೆಟ್ರಿ ಗಾಗಿ) 55 ಜನರಿಗೆ – ಅಂದಾಜು ಅನುದಾನ ರೂ. 1500/-

- ವಿವಿಧ ಸ್ಥಳಗಳ ಪ್ರವೇಶ ಶುಲ್ಕ (ವಿನಾಯಿತಿ ಪಡೆಯಲು ಮೊದಲೆ ಅನುಮತಿ ಪಡೆದಿರಬೇಕು), ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ – ಅಂದಾಜು ಅನುದಾನ ರೂ. 500/-
- ಬಸ್ ಹಾಲ್ಟಿಂಗ್ ಫೀ – ಅಂದಾಜು ಅನುದಾನ ರೂ. 100/-
- ಡ್ರೈವರ್ ಬಾಟ & ಇನ್ಸೂರನ್ಸ್– ಅಂದಾಜು ಅನುದಾನ ರೂ. 600/-
- 54 ಜನರಿಗೆ (ನೋಟ್ ಬುಕ್, ಕ್ಯಾಪ್ಸ್, ಪೆನ್ಸ) – ಅಂದಾಜು ಅನುದಾನ ರೂ. 1500/-
- ಚಿಣ್ಣರ ಜಿಲ್ಲಾ ದರ್ಶನ ಕೈಪಿಡಿ 55 ಪುಸ್ತಕಗಳಿಗೆ – ಅಂದಾಜು ಅನುದಾನ ರೂ. 1100/- (ಡಯಟ್ ತಯಾರಿಸಿದಂತಹ ಕೈಪಿಡಿಯ ಮುದ್ರಣವನ್ನು ಉಪನಿರ್ದೇಶಕರು ನಿಯಮಾನುಸಾರ ಮುದ್ರಿಸುವುದು)
- ಧಾಖಲೀಕರಣ – ರೂ.300/-
- ಔಷಧಿ– ರೂ. 200/-

**ಮೇಲಿನ ಘಟಕ ವೆಚ್ಚ ಸಾಂಕೇತಿಕವಾಗಿದ್ದು, ಮರುಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದೆ.**

**ಒಟ್ಟು 50 ಮಕ್ಕಳು ಹಾಗೂ 4 ಶಿಕ್ಷಕರಿಗೆ 2 ದಿನದ ಪ್ರವಾಸಕ್ಕೆ ಗರಿಷ್ಠ ವೆಚ್ಚ ಮಾಡಬಹುದಾದ ಅನುದಾನ: 25000/-. (ಪ್ರತಿ ಮಗುವಿಗೆ ತಗಲುವ ಅಂದಾಜು ವೆಚ್ಚ ರೂ. 500/-)**

2. **ಚಿಣ್ಣರ ಜಿಲ್ಲಾ ದರ್ಶನವನ್ನು ಎರಡು ದಿನಗಳು ಆಯೋಜನಿಸುವುದು. ಇದರಲ್ಲಿ ಸಾಧ್ಯವಾದರೆ ಸುತ್ತಮುತ್ತಲ ಗರಿಷ್ಠ 2 ಜಿಲ್ಲೆಗಳನ್ನು ಸಹ ಪ್ರವಾಸ ಮಾಡಿಸುವುದು.**
3. **ಅನುಷ್ಠಾನಕ್ಕೆ ಸಂಬಂಧಿಸಿದ ಅಂಶಗಳು:**
   - ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚಿಣ್ಣರ ಜಿಲ್ಲಾ ದರ್ಶನ ಸಮನ್ವಯ ಸಮಿತಿಯನ್ನು ರಚಿಸುವುದು.( ಜಿಲ್ಲಾ ಉಪನಿರ್ದೇಶಕರು(ಆ) – ಸದಸ್ಯ ಕಾರ್ಯದರ್ಶಿಗಳು , ಡಯಟ್ ಪ್ರಾಂಶುಪಾಲರು– ಉಪ ಅಧ್ಯಕ್ಷಕರು , ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ– ಸ.ಶಿ.ಅ, ಡಯಟ್‌ನ ಸಿ.ಎಂ.ಡಿ.ಇ ವಿಭಾಗದ ಮುಖ್ಯಸ್ಥರು, ಆಯಾ ಜಿಲ್ಲೆಯ ಎಲ್ಲಾ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲಾ ತಾಲ್ಲೂಕಿನ ತಹಸಿಲ್ದಾರ್ರು, ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ, ಆರ್.ಟಿ.ಓ ಪ್ರತಿನಿಧಿ, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು, ಪ್ರತಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಕ ಸಂಘದ ಪ್ರತಿನಿಧಿ, ಜಿಲ್ಲಾ ಕೆ.ಎಸ್.ಟಿ.ಡಿ.ಸಿ ಪ್ರತಿನಿಧಿ ಓಳಗೊಂಡಂತೆ ರಚಿಸುವುದು). ಜಿಲ್ಲೆಯ ಎಲ್ಲಾ ವಲಯಗಳ ಜಿಲ್ಲಾ ದರ್ಶನಕ್ಕೆ ಸಂಬಂಧಿಸಿದಂತೆ ತಾಲ್ಲೂಕು ವಾರು ಕ್ರಿಯಾ ಯೋಜನೆಯನ್ನು ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯ ನಿರ್ವಹಿಸುವುದು.
   - ತಾಲ್ಲೂಕು ಹಂತದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಚಿಣ್ಣರ ಜಿಲ್ಲಾ ದರ್ಶನ ಅನುಷ್ಠಾನ ಸಮಿತಿಯನ್ನು ರಚಿಸುವುದು (ಸದಸ್ಯರುಗಳು: ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ, ತಾಲ್ಲೂಕು ಪಂಚಾಯಿತಿ ಪ್ರತಿನಿಧಿ, ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು, ಆರ್.ಟಿ.ಓ ಪ್ರತಿನಿಧಿ, 2 ಸಿ.ಎ.ಈ.ಓ ಓಳಗೊಂಡಂತೆ ರಚಿಸುವುದು). ಹಾಗೂ ಪ್ರತಿ ಶೈಕ್ಷಣಿಕ ವಲಯದಲ್ಲಿ ಪ್ರತಿ ತಂಡ ಪ್ರವಾಸ ಹೊರಡುವಲ್ಲಿ ಮಕ್ಕಳ ಆಯ್ಕೆ, ರೂಟ್ ಮ್ಯಾಪ್ ತಯಾರಿಕೆ, ತಂಡದ ಇನ್ಸೂರೆನ್ಸ ಮಾಡಿಸುವುದು, ಊಟ, ವಸತಿ, ಒಟ್ಟಾರೆ ಕ್ರಿಯಾ ಯೋಜನೆ ತಯಾರಿಕೆಯಿಂದ ಹಿಡಿದು ಅನುಷ್ಠನದ ವರೆವಿಗೂ ಈ ಸಮಿತಿ ಕಾರ್ಯ ನಿರ್ವಹಿಸುತ್ತದೆ. ಯಾವುದೇ ಕಾರಣಕ್ಕೂ ವಸತಿಗೆ ಯೋಗ್ಯವಿಲ್ಲದ ಸ್ಥಳಗಳಲ್ಲಿ ಮಕ್ಕಳಿಗೆ ವಸತಿ ವ್ಯವಸ್ಥೆ ಮಾಡುವಂತಿಲ್ಲ.

4. **ವಿದ್ಯಾರ್ಥಿಗಳನ್ನು ಹಾಗೂ ಮೇಲ್ವಿಚಾರಕರ ಆಯ್ಕೆಗೆ ಮಾನದಂಡಗಳು**

   **<u>ವಿದ್ಯಾರ್ಥಿಗಳನ್ನು ಆಯ್ಕೆ</u>**

   - ಪ್ರತಿ ಬ್ಲಾಕ್‌ಗೆ ಹತ್ತು ಅಥವಾ ಹೆಚ್ಚಿನ ತಂಡಗಳಂತೆ ಹಾಗೂ ಪ್ರತಿ ತಂಡದಲ್ಲಿ 50 ಮಕ್ಕಳಿರುವಂತೆ ಪ್ರವಾಸ ತಂಡಗಳನ್ನು ರಚಿಸಬೇಕು. ಹಾಗಾಗಿ ಪ್ರತಿ ಬ್ಲಾಕ್ ನಿಂದ ಕನಿಷ್ಠ 500 ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು. ಇನ್ನೂ ಹೆಚ್ಚಿನ ತಂಡಗಳನ್ನು ಸಹ ಆಯೋಜಿಸಬಹುದಾಗಿದೆ. (ಹೆಚ್ಚುವರಿಯಾಗಿ ಆಯ್ಕೆಯಾಗಿರುವ 38 ಬ್ಲಾಕ್‌ಗಳಲ್ಲಿ ಹೆಚ್ಚುವರಿ ಕನಿಷ್ಠ 4 ತಂಡಗಳು –200 ವಿದ್ಯಾರ್ಥಿಗಳು, ಅಂದರೆ ಈ ಬ್ಲಾಕ್ ನಲ್ಲಿ ಒಟ್ಟಾರೆಯಾಗಿ ಕನಿಷ್ಠ 14 ಅಥವಾ ಹೆಚ್ಚಿನ ತಂಡಗಳಂತೆ ಹಾಗೂ ಕನಿಷ್ಠ 700 ಮಕ್ಕಳು ಒಳಗೊಂಡಂತೆ ಪ್ರವಾಸ ಹಮ್ಮಿಕೊಳ್ಳುವುದು).

***ವಿಶೇಷ ಸೂಚನೆ: ಖಂಡಿಕೆ 1 (ಯೋಜನೆಯ ಆಯುವ್ಯಯ) ರ ಘಟಕ ವೆಚ್ಚ (50 ಮಕ್ಕಳ ಒಂದು ತಂಡಕ್ಕೆ ರೂ. 20,000) ದಲ್ಲಿ ಉಳಿಕೆ ಆದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು.***

- 5, 6 ಮತ್ತು 7ನೇ ತರಗತಿಯ ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡುವುದು.
- ಆಯಾ ಶೈಕ್ಷಣಿಕ ವಲಯದ 5, 6 ಮತ್ತು 7ನೇ ತರಗತಿಯಲ್ಲಿ ಎಲ್ಲ ಮಕ್ಕಳ ಒಟ್ಟು ಸಂಖ್ಯೆಯಲ್ಲಿ 75% ಎಸ್.ಸಿ./ಎಸ್.ಟಿ ಹಾಗೂ 25% ಪ್ರತಿಭಾನ್ವಿತ ಮಕ್ಕಳನ್ನು ಜಿಲ್ಲಾ ಚಿಣ್ಣರ ದರ್ಶನಕ್ಕೆ ಆಯ್ಕೆ ಮಾಡುವುದು.
- ಪ್ರತಿ ತಂಡದ 50 ಮಕ್ಕಳಲ್ಲಿ : 38 ಎಸ್.ಸಿ./ಎಸ್.ಟಿ ಮಕ್ಕಳು ಇರಬೇಕು, ಇದರಲ್ಲಿ ಕನಿಷ್ಠ 25 ಹೆಣ್ಣು ಮಕ್ಕಳು ಇರಬೇಕು. ಹಾಗೂ 12 ಇತರೆ ಪ್ರತಿಭಾನ್ವಿತ ಮಕ್ಕಳಲ್ಲಿ ಕನಿಷ್ಠ 7 ಹೆಣ್ಣು ಮಕ್ಕಳು ಇರಬೇಕು.
- ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಹಾಗೂ ದೀರ್ಘಕಾಲಿಕ ಕಾಯಿಲೆಗಳಿಂದ ನರಳುತ್ತಿರುವವರನ್ನು ಕರೆತರಬಾರದು.
- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ಜಿಲ್ಲಾ ದರ್ಶನಕ್ಕೆ, ಮಕ್ಕಳನ್ನು ಆಯ್ಕೆ ಮಾಡುವಲ್ಲಿ ಪ್ರತಿ ತಾಲ್ಲೂಕಿನಿಂದ ಆಯ್ಕೆ ಮಾಡಲು ತಾಲ್ಲೂಕು ಸಮಿತಿಯನ್ನು ಬಿ.ಇ.ಓ, ಬಿ.ಆರ್.ಸಿ, ತಾಲ್ಲೂಕು ಪಂಚಾಯತ್‌ನ ಒಬ್ಬರು ಸದಸ್ಯರು ಹಾಗೂ ಒಂದು ಸ್ವಯಂಸೇವಕ ಸಂಘದ ಪ್ರತಿನಿಧಿಯನ್ನು ಒಳಗೊಂಡಂತೆ ರಚಿಸಿ ಮೇಲಿನ ಮಾನದಂಡದಂತೆ ಆಯ್ಕೆ ಮಾಡುವುದು.

**<u>ಶಿಕ್ಷಕರನ್ನು ಆಯ್ಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳು</u>**

- ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ಪುರುಷ ಶಿಕ್ಷಕರು ಹಾಗೂ ಇಬ್ಬರು ಮಹಿಳಾ ಶಿಕ್ಷಕರಿರಬೇಕು.
- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ವಿಜ್ಞಾನ ಹಾಗೂ ಒಬ್ಬರು ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿರಬೇಕು.
- ಆರೋಗ್ಯವಂತ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- 50 ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಪ್ರತಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

**<u>ಚಿಣ್ಣರ ಜಿಲ್ಲಾ ದರ್ಶನ ಕೈಪಿಡಿ ಮುದ್ರಣ:</u>**

ಚಿಣ್ಣರ ಜಿಲ್ಲಾ ದರ್ಶನ ಕೈಪಿಡಿ ಮುದ್ರಣವನ್ನು ಜಿಲ್ಲಾ ಯೋಜನಾ ಸಮನ್ವಯ ಅಧಿಕಾರಿಗಳ ಕಛೇರಿಯಲ್ಲಿ ಮುದ್ರಿಸುವುದು. 2009-10 ನೇ ಸಾಲಿನಲ್ಲಿ ಮುದ್ರಿಸಿದ ಹೊತ್ತಿಗೆಯನ್ನು ಪರಿಷ್ಕರಿಸಲು ಹಾಗೂ ವಿನ್ಯಾಸ ಬದಲಿಸಲು ಪ್ರತೀ ಜಿಲ್ಲೆಯಲ್ಲಿ ನೋಡೆಲ್ ಅಧಿಕಾರಿಗಳು, ಬಿಇಓ, ಬಿ.ಆರ್.ಸಿ., ನಿವೃತ್ತ ಶಿಕ್ಷಕರು, ಉತ್ತಮ ಶಿಕ್ಷಕರು ಇತ್ಯಾದಿ 15 ಸದಸ್ಯರನ್ನೊಳಗೊಂಡ ತಂಡ ರಚಿಸುವುದು.(ಇತಿಹಾಸ ತಜ್ಞರು; ಇತಿಹಾಸ ಪ್ರಾಚ್ಯ ಸಂಶೋಧನಾ ಇಲಾಖೆ; ಕೆ.ಎಸ್.ಟಿ.ಡಿ.ಸಿ. ಪ್ರತಿನಿಧಿ ಇತ್ಯಾದಿ) ಹಾಗೂ ಪರಿಷ್ಕರಣೆ ಮಾಡುವುದು.

- ಪ್ರತೀ ಜಿಲ್ಲೆಯಲ್ಲಿ 03 ದಿನದ ಕಾರ್ಯಾಗಾರ ನಡೆಸುವುದು.

ಜಿಲ್ಲಾ ಸಮನ್ವಯ ಸಮಿತಿಯು ತೀರ್ಮಾನಿಸಿದಲ್ಲಿ ಅದನ್ನು ಪರಿಷ್ಕರಿಸುವುದು. ಈ ಸಾಲಿನಲ್ಲಿಯೂ ಮಕ್ಕಳ ಅನುಗುಣವಾಗಿ ಮುದ್ರಿಸುವುದು. ಮುದ್ರಣ ಸಂದರ್ಭದಲ್ಲಿ ಮುದ್ರಿತ ಸಾಹಿತ್ಯವನ್ನು 68 ಗರಿಷ್ಠ ಪುಟಗಳಿಗೆ ಸೀಮಿತಗೊಳಿಸುವುದು (ಕವರ್ ಪೇಜ್ ಸೇರಿದಂತೆ), ಆದರೆ ಗುಣಮಟ್ಟ ಹೊಂದಿರುವಂತಹ ಜಿಲ್ಲಾ ಪ್ರವಾಸವನ್ನು ಹಮ್ಮಿಕೊಳ್ಳುವಲ್ಲಿ ಕಡ್ಡಾಯವಾಗಿ ಜಿಲ್ಲೆಯ ಮುಖ್ಯವಾದ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ,

ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿ ಸ್ಥಳಗಳನ್ನು ಆಯ್ಕೆ ಮಾಡುವುದು. ಪುಟಗಳ ಸಂಖ್ಯೆಯನ್ನು ಗುಣಮಟ್ಟ ಕಾಪಾಡುವಲ್ಲಿ ಕಡಿಮೆ ಸಹ ಮಾಡಲು ಅವಕಾಶವಿರುತ್ತದೆ. ಹೆಚ್ಚುವರಿಯಾಗಿ ಕೈಪಿಡಿಯಲ್ಲಿನ ಸ್ಥಳಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಮ್ಯಾಪ್ ನಲ್ಲಿ ರೂಟ್ ಮ್ಯಾಪ್ ಅಳವಡಿಸುವುದು. ಈ ಪರಿಷ್ಕರಣೆ ಕಾರ್ಯಕ್ಕೆ ಡಯಟ್ ಗಳಿಗೆ ಡಿ.ವೈ.ಪಿ.ಸಿ ಕಛೇರಿಯಿಂದ ಅನುದಾನ ಭರಿಸುವುದು. ಈ ಕಾರ್ಯಕ್ಕೆ ರೂ. 5000 ಮೀಸಲಿರಿಸಿದೆ. ಸದರಿ ಪರಿಷ್ಕರಣೆ ಕಾರ್ಯವನ್ನು ಉ.ನಿ/ಡಿ.ವೈ.ಪಿ.ಸಿ ಇವರೊಂದಿಗೆ ಚರ್ಚಿಸಿ ನಿಗದಿತ ದಿನಾಂಖ ಜೂನ 10, 2010 ರೊಳಗೆ ಅಂತಿಮಗೊಳಿಸುವುದು.

**ಕಿರುಹೊತ್ತಿಗೆ ವಿನ್ಯಾಸ ಮತ್ತು ಒಳಗೊಂಡಿರುವ ವಿಷಯ ಕುರಿತಂತೆ:**

ಚಿಣ್ಣರ ಜಿಲ್ಲಾ ದರ್ಶನದ ಕೈಪಿಡಿಯ ಕರಡನ್ನು 2008-09ನೇ ಸಾಲಿನ ಚಿಣ್ಣರ ಕರ್ನಾಟಕ ದರ್ಶನ ಪ್ರವಾಸ ಕೈಪಿಡಿಯ ಪ್ರತಿಯಲ್ಲಿ ಕೆಲವು ಸಣ್ಣ-ಮಟ್ಟ ಬದಲಾವಣೆಗಳನ್ನು ಅನುಸರಿಸಿ ವಿನ್ಯಾಸ ತಯಾರಿಸುವುದು ಹಾಗೂ ಈ ಕೆಳಕಂಡ ಸ್ಪೆಸಿಫಿಕೇಷನ್ ಅನುಸರಿಸುವುದು ಎಂದು ತಿಳಿಸಲಾಗಿತ್ತು.

ಕವರ್ ಪೇಜ್ ಮುಂಭಾಗ – ಮೇಲೆ ಸಣ್ಣ ಫಾಂಟ್‌ನಲ್ಲಿ ಚಿಣ್ಣರ ಕರ್ನಾಟಕ ದರ್ಶನ ಮಾಲಿಕೆ .......(ನಿಮ್ಮ ಜಿಲ್ಲೆಯ ಕೋಡ್ ನಮೂದಿಸುವುದು) ಪಟ್ಟಿ ಲಗತ್ತಿಸಿದೆ. ಮಧ್ಯದಲ್ಲಿ ಚಿಣ್ಣರ ಜಿಲ್ಲಾ ದರ್ಶನ ................. (ನಿಮ್ಮ ಜಿಲ್ಲೆ ಹೆಸರು ನಮೂದಿಸುವುದು)

ಕವರ್ ಪೇಜ್ ಹಿಂಭಾಗ – ಜಿಲ್ಲೆಯ ಪ್ರಮುಖ ಸ್ಥಳಗಳ ಚಿತ್ರ/ಟಿಪ್ಪಣಿ

ಪುಟ II – ಕವರ್ ಪೇಜ್ ಮುಂಭಾಗದಲ್ಲಿ ಇರುವಂತೆ.

ಪುಟ III – ಕರ್ನಾಟಕದ ನಕ್ಷೆ ಚಿಕ್ಕದಾಗಿ ಹಾಕಿ ಆಯಾ ಜಿಲ್ಲೆಯ ನಕ್ಷೆ ದೊಡ್ಡದಾಗಿ ಹಾಕುವುದು.

ಪುಟ III/IV –ಮುನ್ನುಡಿ (ಸಿಇಓ, ಡಿಡಿಪಿಐ ಹಾಗೂ ಡಯಟ್ ಪ್ರಾಂಶುಪಾಲರ ಸಹಿಯೊಂದಿಗೆ)

ಪುಟ V – ಜಿಲ್ಲೆಯ ವಿಳಾಸ ದೂರವಾಣಿ ಸಂಖ್ಯೆಯೊಂದಿಗೆ

ಪುಟ VI/VII – ಪ್ರವಾಸದ ಪ್ರಾಮುಖ್ಯತೆ, ಆಯ್ಕೆ ಮನದಂಡ ಇತ್ಯಾದಿ (02 ಪುಟಗಳು)

ಪುಟ VIII – ಜಿಲ್ಲೆಯ ಇತಿಹಾಸ

68 ಒಳಪುಟಗಳು – 01 ಪುಟಕ್ಕೆ ಒಂದು ಸ್ಥಳದ ವಿವರಣೆಯನ್ನು ಫೋಟೋದೊಂದಿಗೆ ನೀಡುವುದು.

**ಸ್ಪೆಸಿಫಿಕೇಶನ್:**

| | | |
|---|---|---|
| ಅಳತೆ | – | 1/8 ಡೆಮ್ಮಿ(ಬಿ/ಬಿ) |
| ಕವರ್ ಪೇಜ್ | – | 220 ಜಿ.ಎಸ್.ಎಂ. ಪಾರಿನ್ ಆರ್ಟ್ ಪೇಪರ್ |
| ಬಣ್ಣ | – | ಎಲ್ಲಾ ಪುಟಗಳು ಬಹು ವರ್ಣ |
| ಒಳ ಪುಟಗಳು | – | 80 ಜಿ.ಎಸ್.ಎಂ. – ಮ್ಯಾಪ್ಲಿಥೋ |
| ಒಟ್ಟು ಪ್ರತಿಗಳು | – | ಪ್ರವಾಸ ಹೋಗುವ ಮಕ್ಕಳಿಗೆ ಒಂದೊಂದು ಪ್ರತಿ + ಡಿಡಿಪಿಐ/ ಡಿವೈಪಿಸಿ/ಡಯಟ್/ಬಿಇಓ/ಬಿ.ಆರ್.ಸಿ.(ತಲಾ 03 ಪ್ರತಿ) + ಸಿಎಇಓ (ತಲಾ 01 ಪ್ರತಿ) + ಹೆಚ್ಚುವರಿ(1%) |
| ಬೈಂಡಿಂಗ್ | – | ಸೆಂಟ್ರಲ್ ಪಿನ್ನಿಂಗ್ ಮತ್ತು ಎರಡೂ ಕಡೆ ಪಿನ್. |

ಮುದ್ರಣ ಜವಾಬ್ದಾರಿ ಕಂದಾಯ ಜಿಲ್ಲೆಯ ಜಿಲ್ಲಾ ಯೋಜನ ಸಮನ್ವಯಾಧಿಕಾರಿಗಳದ್ದಾಗಿರುತ್ತದೆ. ಶೈಕ್ಷಣಿಕ ಜಿಲ್ಲೆಗಳಾಗಿ ಮಾರ್ಪಟ್ಟಿರುವ ಜಿಲ್ಲೆಗಳಾದ ರಾಮನಗರ-ಬೆಂಗಳೂರು ಗ್ರಾಮಾಂತರ ಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ-ಬೆಂಗಳೂರು ಉತ್ತರಕ್ಕೆ ಸಂಬಂಧಿಸಿದಂತೆ ಬೆಂಗಳೂರು ಉತ್ತರ, ಚಿಕ್ಕೋಡಿ-ಬೆಳಗಾಂ ಗೆ ಸಂಬಂಧಿಸಿದಂತೆ ಬೆಳಗಾಂ, ತುಮಕೂರು-ಮಧುಗಿರಿಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಗಳು ಮುದ್ರಿಸುವುದು. ಇದಕ್ಕೆ ಸಂಬಂಧಿಸಿದಂತೆ ಮುದ್ರಣ ಘಟಕವೆಚ್ಚವನ್ನು ಮೇಲೆ ಸೂಚಿಸಿದ ಜಿಲ್ಲೆಗಳು ಭರಿಸುವುದು.

ವಿಶೇಷ ಸೂಚನೆ: ಮಕ್ಕಳ ಅನುಪಾತಕ್ಕೆ ಸಂಬಂಧಿಸಿದಂತೆ ಕೈಪಿಡಿಯನ್ನು ಮುದ್ರಿಸಿ ಪ್ರವಾಸಕ್ಕೆ ಹೊರಡುವ ಮಕ್ಕಳಿಗೆ ಕಡ್ಡಾಯವಾಗಿ ಪ್ರವಾಸದ ದಿನ ನೀಡುವುದು. ಹೆಚ್ಚುವರಿಯಾಗಿ ಕೈಪಿಡಿಯ 100 ಪ್ರತಿಗಳನ್ನು ಸ.ಶಿ.ಅ ರಾಜ್ಯಕಛೇರಿಗೆ ಹಾಗೂ 25 ಪ್ರತಿಗಳನ್ನು ಡಯಟ್ಟ ಮತ್ತು ಬಿ.ಆರ್.ಸಿ ಕೇಂದ್ರಗಳಿಗೆ ನೀಡಲು ಮುದ್ರಿಸಿ ತಲುಪಿಸುವುದು.

**ಚಿಣ್ಣರ ಜಿಲ್ಲಾ ದರ್ಶನದ ವೇಳಾಪಟ್ಟಿ:**

1. ಕೈಪಿಡಿ ಮುದ್ರಣ ಕಾರ್ಯ ಅಂತಿಮಗೊಳಿಸುವ ದಿನಾಂಕ: 30-06-2010.
2. ಅಂತಿಮ ಮುದ್ರಿತ ಪತ್ರಿಗಳನ್ನು ಸ.ಶಿ.ಅ ಕಛೇರಿಗೆ ಸಲ್ಲಿಸುವ ದಿನಾಂಕ 15-07-2010.
3. ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಆರಂಭ- 1-08-2010.
4. ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಮುಕ್ತಾಯ- 31-12-2010.
5. ಜಿಲ್ಲಾವಾರು ದಾಖಲೀಕರಣ ಮಾಡಿ ಪ್ರತಿಯನ್ನು ಜಿಲ್ಲಾ ಸ.ಶಿ.ಅ ಕಛೇರಿಗೆ ಒದಗಿಸುವ ದಿನಾಂಕ 10-01-2011.
6. ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ( ವರ್ಗವಾರು ಕೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪ್ರತಿ ಸಲ್ಲಿಸುವ ದಿನಾಂಕ: 31-1-2011.

**ಜಿಲ್ಲಾವಾರು ಪ್ರವಾಸದ ಅನುದಾನದ ವಿವರ ಲಗತ್ತಿಸಿದೆ: ಅದರಂತೆ ಜಿಲ್ಲೆಗಳಿಗೆ ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡಲಾಗುವುದು.**

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಪ್ರತಿಗಳು ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು ( ಆಡಳಿತ) ಮತ್ತು ಉಪನಿರ್ದೇಶಕರು ( ಅಭಿವೃದ್ಧಿ).
2. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿಗಳು, ಸ.ಶಿ.ಅ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣ ಅಧಿಕಾರಿಗಳು.

**ಪ್ರತಿಗಳು ಮಾಹಿತಿಗಾಗಿ:**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಯ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು, ಗುಲ್ಬರ್ಗಾ ಹಾಗೂ ಧಾರವಾಡ ಆಯುಕ್ತಾಲಯ.
4. ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
5. ಈ ಕಚೇರಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ.

## ಚಿಣ್ಣರ ಜಿಲ್ಲಾ ದರ್ಶನ

| ಕ್ರ. ಸಂ | ಜಿಲ್ಲೆಯ ಹೆಸರು | ಬ್ಲಾಕ್‌ನ ಹೆಸರು | ಪ್ರತಿ ವಲಯಕ್ಕೆ 8 ತಂಡಗಳಂತೆ ಪ್ರತಿ ತಂಡಕ್ಕೆ 25000/- ಅನುದಾನ | ಬ್ಲಾಕ್ ಗಳ ಸಂಖ್ಯೆ | ಪ್ರತಿ ಜಿಲ್ಲೆಗೆ ಅನುದಾನ | ಹೆಚ್ಚುವರಿ 3 ತಂಡಗಳ ಪ್ರವಾಸಕ್ಕೆ ಸಂಬಂಧಿಸಿದಂತೆ ವಲಯವಾರು ಅನುದಾನ | ಹೆಚ್ಚುವರಿ ತಂಡಗಳಿಗಾಗಿ ಒಟ್ಟು ಜಿಲ್ಲೆಗೆ ಬಿಡುಗಡೆ ಮಾಡುವ ಅನುದಾನ | ಜಿಲ್ಲಾ ಹಂತದಲಿ ಡಯಟ್ ವತಿಯಿಂದ ಕೈಪಿಡಿ ಪರಿಷ್ಕರಣೆ ಗೆ ಗರಿಷ್ಠ ರೂ. 5000. | ಒಟ್ಟು ಜಿಲ್ಲೆಗಳ ಅನುದಾನ |
|---|---|---|---|---|---|---|---|---|---|
| 1 | ಬಾಗಲಕೋಟೆ | ಬಾದಾಮಿ | 200000 | 6 | 1200000 | | | 5000 | 1205000 |
| 2 | ಬಾಗಲಕೋಟೆ | ಬಾಗಲಕೋಟೆ | 200000 | | | | | | |
| 3 | ಬಾಗಲಕೋಟೆ | ಬೀಳಗಿ | 200000 | | | | | | |
| 4 | ಬಾಗಲಕೋಟೆ | ಹುನಗುಂದ | 200000 | | | | | | |
| 5 | ಬಾಗಲಕೋಟೆ | ಜಮಖಂಡಿ | 200000 | | | | | | |
| 6 | ಬಾಗಲಕೋಟೆ | ಮುಧೋಳ | 200000 | | | | | | |
| 7 | ಬೆಂಗಳೂರು ಉತ್ತರ | ಬೆಂಗಳೂರು ಉತ್ತರ-1 | 200000 | 4 | 800000 | | | 5000 | 805000 |
| 8 | ಬೆಂಗಳೂರು ಉತ್ತರ | ಬೆಂಗಳೂರು ಉತ್ತರ-2 | 200000 | | | | | | |
| 9 | ಬೆಂಗಳೂರು ಉತ್ತರ | ಬೆಂಗಳೂರು ಉತ್ತರ-4 | 200000 | | | | | | |
| 10 | ಬೆಂಗಳೂರು ಉತ್ತರ | ಬೆಂಗಳೂರು ಉತ್ತರ-3 | 200000 | | | | | | |
| 11 | ಬೆಂಗಳೂರು ದಕ್ಷಿಣ | ಬೆಂಗಳೂರು ದಕ್ಷಿಣ-1 | 200000 | 5 | 1000000 | | | | 1000000 |
| 12 | ಬೆಂಗಳೂರು ದಕ್ಷಿಣ | ಬೆಂಗಳೂರು ದಕ್ಷಿಣ-2 | 200000 | | | | | | |
| 13 | ಬೆಂಗಳೂರು ದಕ್ಷಿಣ | ಬೆಂಗಳೂರು ದಕ್ಷಿಣ-3 | 200000 | | | | | | |
| 14 | ಬೆಂಗಳೂರು ದಕ್ಷಿಣ | ಬೆಂಗಳೂರು ದಕ್ಷಿಣ-4 | 200000 | | | | | | |
| 15 | ಬೆಂಗಳೂರು ದಕ್ಷಿಣ | ಆನೇಕಲ್ | 200000 | | | | | | |

| | | | | | | | | | |
|---|---|---|---|---|---|---|---|---|---|
| 16 | **ಬೆಂಗಳೂರು ಗ್ರಾಮಾಂತರ** | **ನೆಲಮಂಗಲ** | 200000 | 4 | 800000 | | | 5000 | 805000 |
| 17 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | 200000 | | | | | | |
| 18 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 200000 | | | | | | |
| 19 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | 200000 | | | | | | |
| 20 | **ರಾಮನಗರ** | **ಮಾಗಡಿ** | 200000 | 4 | 800000 | | | 5000 | 805000 |
| 21 | ರಾಮನಗರ | ರಾಮನಗರ | 200000 | | | | | | |
| 22 | ರಾಮನಗರ | ಚೆನ್ನಪಟ್ಟಣ | 200000 | | | | | | |
| 23 | ರಾಮನಗರ | ಕನಕಪುರ | 200000 | | | | | | |
| 24 | **ಬೆಳಗಾಂ** | **ಬೈಲಹೊಂಗಲ** | 200000 | 6 | 1200000 | | | 5000 | 1205000 |
| 25 | ಬೆಳಗಾಂ | ಬೆಳಗಾಂ ನಗರ | 200000 | | | | | | |
| 26 | ಬೆಳಗಾಂ | ಬೆಳಗಾಂ ಗ್ರಾಮಾಂತರ | 200000 | | | | | | |
| 27 | ಬೆಳಗಾಂ | ಖಾನಾಪುರ | 200000 | | | | | | |
| 28 | ಬೆಳಗಾಂ | ರಾಮದುರ್ಗ | 200000 | | | | | | |
| 29 | ಬೆಳಗಾಂ | ಸೌಂದತ್ತಿ | 200000 | | | | | | |
| 30 | **ಚಿಕ್ಕೋಡಿ** | **ಅಥಣಿ** | 200000 | 8 | 1600000 | | 75000 | | 1675000 |
| 31 | ಚಿಕ್ಕೋಡಿ | ಕಾಗವಾಡ | 200000 | | | | | | |
| 32 | ಚಿಕ್ಕೋಡಿ | ಚಿಕ್ಕೋಡಿ | 200000 | | | | | | |
| 33 | ಚಿಕ್ಕೋಡಿ | ನಿಪ್ಪಾಣಿ | 200000 | | | | | | |
| 34 | ಚಿಕ್ಕೋಡಿ | ಗೋಖಾಕ್ | 200000 | | | | | | |
| 35 | ಚಿಕ್ಕೋಡಿ | ಮೂಡಲ್ಗಿ | 200000 | | | | | | |
| 36 | ಚಿಕ್ಕೋಡಿ | ಹುಕ್ಕೇರಿ | 200000 | | | 75000 | | | |
| 37 | ಚಿಕ್ಕೋಡಿ | ರಾಯ್‌ಬಾಗ್ | 200000 | | | | | | |

| | | | | | | | | | |
|---|---|---|---|---|---|---|---|---|---|
| **38** | **ಬಳ್ಳಾರಿ** | **ಬಳ್ಳಾರಿ ಪೂರ್ವ** | 200000 | 8 | 1600000 | 75000 | 375000 | 5000 | 1980000 |
| 39 | ಬಳ್ಳಾರಿ | ಬಳ್ಳಾರಿ ಪಶ್ಚಿಮ | 200000 | | | 75000 | | | |
| 40 | ಬಳ್ಳಾರಿ | ಹಡಗಲಿ | 200000 | | | | | | |
| 41 | ಬಳ್ಳಾರಿ | ಹೆಚ್.ಬಿ.ಹಳ್ಳಿ | 200000 | | | | | | |
| 42 | ಬಳ್ಳಾರಿ | ಹೊಸಪೇಟೆ | 200000 | | | 75000 | | | |
| 43 | ಬಳ್ಳಾರಿ | ಕೂಡ್ಲಿಗಿ | 200000 | | | 75000 | | | |
| 44 | ಬಳ್ಳಾರಿ | ಸಂಡೂರು | 200000 | | | 75000 | | | |
| 45 | ಬಳ್ಳಾರಿ | ಸಿರಗುಪ್ಪ | 200000 | | | | | | |
| **46** | **ಬೀದರ್** | **ಔರಾದ್** | 200000 | 5 | 1000000 | 75000 | 225000 | 5000 | 1230000 |
| 47 | ಬೀದರ್ | ಬಸವ ಕಲ್ಯಾಣ | 200000 | | | 75000 | | | |
| 48 | ಬೀದರ್ | ಬಾಲ್ಕಿ | 200000 | | | | | | |
| 49 | ಬೀದರ್ | ಬೀದರ್ | 200000 | | | | | | |
| 50 | ಬೀದರ್ | ಹುಮ್ನಾಬಾದ್ | 200000 | | | 75000 | | | |
| **51** | **ಬಿಜಾಪುರ** | **ಬಸವನ ಬಾಗೇವಾಡಿ** | 200000 | 7 | 1400000 | | 150000 | 5000 | 1555000 |
| 52 | ಬಿಜಾಪುರ | ಬಿಜಾಪುರ ನಗರ | 200000 | | | | | | |
| 53 | ಬಿಜಾಪುರ | ಬಿಜಾಪುರ ಗ್ರಾಮಾಂತರ | 200000 | | | 75000 | | | |
| 54 | ಬಿಜಾಪುರ | ಇಂಡಿ | 200000 | | | | | | |
| 55 | ಬಿಜಾಪುರ | ಚಡಚಣ | 200000 | | | | | | |
| 56 | ಬಿಜಾಪುರ | ಮುದ್ದೆಬಿಹಾಳ | 200000 | | | | | | |
| 57 | ಬಿಜಾಪುರ | ಸಿಂದಗಿ | 200000 | | | 75000 | | | |

| | | | | | | | | | |
|---|---|---|---|---|---|---|---|---|---|
| **58** | **ಚಾಮರಾಜನಗರ** | **ಚಾಮರಾಜನಗರ** | 200000 | 5 | 1000000 | | | 5000 | 1005000 |
| 59 | ಚಾಮರಾಜನಗರ | ಗುಂಡ್ಲೂಪೇಟೆ | 200000 | | | | | | |
| 60 | ಚಾಮರಾಜನಗರ | ಹನೂರು | 200000 | | | | | | |
| 61 | ಚಾಮರಾಜನಗರ | ಕೊಳ್ಳೇಗಾಲ | 200000 | | | | | | |
| 62 | ಚಾಮರಾಜನಗರ | ಯಲಂದೂರು | 200000 | | | | | | |
| **63** | **ಚಿಕ್ಕಮಗಳೂರು** | **ಚಿಕ್ಕಮಗಳೂರು** | 200000 | 8 | 1600000 | | | 5000 | 1605000 |
| 64 | ಚಿಕ್ಕಮಗಳೂರು | ಕಡೂರು | 200000 | | | | | | |
| 65 | ಚಿಕ್ಕಮಗಳೂರು | ಕೊಪ್ಪ | 200000 | | | | | | |
| 66 | ಚಿಕ್ಕಮಗಳೂರು | ಮೂಡಿಗೆರೆ | 200000 | | | | | | |
| 67 | ಚಿಕ್ಕಮಗಳೂರು | ಎನ್.ಆರ್.ಪುರ | 200000 | | | | | | |
| 68 | ಚಿಕ್ಕಮಗಳೂರು | ಶೃಂಗೇರಿ | 200000 | | | | | | |
| 69 | ಚಿಕ್ಕಮಗಳೂರು | ತರೀಕೆರೆ | 200000 | | | | | | |
| 70 | ಚಿಕ್ಕಮಗಳೂರು | ಬೀರೂರು | 200000 | | | | | | |
| **71** | **ಚಿತ್ರದುರ್ಗ** | **ಚಿತ್ರದುರ್ಗ** | 200000 | 6 | 1200000 | 75000 | 300000 | 5000 | 1505000 |
| 72 | ಚಿತ್ರದುರ್ಗ | ಚಳ್ಳಕೆರೆ | 200000 | | | 75000 | | | |
| 73 | ಚಿತ್ರದುರ್ಗ | ಹಿರಿಯೂರು | 200000 | | | 75000 | | | |
| 74 | ಚಿತ್ರದುರ್ಗ | ಹೊಳಲ್ಕೆರೆ | 200000 | | | | | | |
| 75 | ಚಿತ್ರದುರ್ಗ | ಹೊಸದುರ್ಗ | 200000 | | | | | | |
| 76 | ಚಿತ್ರದುರ್ಗ | ಮೊಳಕಾಲ್ಮೂರು | 200000 | | | 75000 | | | |

| | | | | | | | | | |
|---|---|---|---|---|---|---|---|---|---|
| **77** | **ದಕ್ಷಿಣ ಕನ್ನಡ** | **ಭಂಟ್ವಾಳ** | 200000 | 7 | 1400000 | | | 5000 | 1405000 |
| 78 | ದಕ್ಷಿಣ ಕನ್ನಡ | ಬೆಳ್ತಂಗಡಿ | 200000 | | | | | | |
| 79 | ದಕ್ಷಿಣ ಕನ್ನಡ | ಮಂಗಳೂರು ನಗರ | 200000 | | | | | | |
| 80 | ದಕ್ಷಿಣ ಕನ್ನಡ | ಮಂಗಳೂರು ತಾಲ್ಲೂಕು | 200000 | | | | | | |
| 81 | ದಕ್ಷಿಣ ಕನ್ನಡ | ಮೂಡಬಿದಿರೆ | 200000 | | | | | | |
| 82 | ದಕ್ಷಿಣ ಕನ್ನಡ | ಪುತ್ತೂರು | 200000 | | | | | | |
| 83 | ದಕ್ಷಿಣ ಕನ್ನಡ | ಸುಳ್ಯ | 200000 | | | | | | |
| **84** | **ದಾವಣಗೆರೆ** | **ಚನ್ನಗಿರಿ** | 200000 | 7 | 1400000 | 75000 | 75000 | 5000 | 1480000 |
| 85 | ದಾವಣಗೆರೆ | ದಾವಣಗೆರೆ ಉತ್ತರ | 200000 | | | | | | |
| 86 | ದಾವಣಗೆರೆ | ದಾವಣಗೆರೆ ದಕ್ಷಿಣ | 200000 | | | | | | |
| 87 | ದಾವಣಗೆರೆ | ಹರಪ್ಪನಹಳ್ಳಿ | 200000 | | | | | | |
| 88 | ದಾವಣಗೆರೆ | ಹರಿಹರ | 200000 | | | | | | |
| 89 | ದಾವಣಗೆರೆ | ಹೊನ್ನಾಳಿ | 200000 | | | | | | |
| 90 | ದಾವಣಗೆರೆ | ಜಗಳೂರು | 200000 | | | | | | |
| **91** | **ಧಾರವಾಡ** | **ಧಾರವಾಡ** | 200000 | 6 | 1200000 | | | 5000 | 1205000 |
| 92 | ಧಾರವಾಡ | ಹುಬ್ಬಳ್ಳಿ | 200000 | | | | | | |
| 93 | ಧಾರವಾಡ | ಹೆಚ್‌ಡಿಎಂಸಿ ಹುಬ್ಬಳ್ಳಿ | 200000 | | | | | | |
| 94 | ಧಾರವಾಡ | ಕಲಘಟಗಿ | 200000 | | | | | | |
| 95 | ಧಾರವಾಡ | ಕುಂದಗೋಲ್ | 200000 | | | | | | |
| 96 | ಧಾರವಾಡ | ನವಲಗುಂದ | 200000 | | | | | | |

| | | | | | | | | | |
|---|---|---|---|---|---|---|---|---|---|
| **97** | **ಗದಗ** | **ಗದಗ ನಗರ** | 200000 | 6 | 1200000 | | | 5000 | 1205000 |
| 98 | ಗದಗ | ಗದಗ ಗ್ರಾಮಾಂತರ | 200000 | | | | | | |
| 99 | ಗದಗ | ಮುಂಡರಗಿ | 200000 | | | | | | |
| 100 | ಗದಗ | ನರಗುಂದ | 200000 | | | | | | |
| 101 | ಗದಗ | ರೋಣ | 200000 | | | | | | |
| 102 | ಗದಗ | ಶಿರಹಟ್ಟಿ | 200000 | | | | | | |
| **103** | **ಗುಲ್ಬರ್ಗ** | **ಅಫ್ಜಲ್‌ಪುರ** | 200000 | 7 | 1400000 | | 150000 | 5000 | 1555000 |
| 104 | ಗುಲ್ಬರ್ಗ | ಆಲಂದ | 200000 | | | 75000 | | | |
| 105 | ಗುಲ್ಬರ್ಗ | ಚಿಂಚೋಲಿ | 200000 | | | | | | |
| 106 | ಗುಲ್ಬರ್ಗ | ಚಿತ್ತಪುರ | 200000 | | | 75000 | | | |
| 107 | ಗುಲ್ಬರ್ಗ | ಗುಲ್ಬರ್ಗ ಉತ್ತರ | 200000 | | | | | | |
| 108 | ಗುಲ್ಬರ್ಗ | ಗುಲ್ಬರ್ಗ ದಕ್ಷಿಣ | 200000 | | | | | | |
| 109 | ಗುಲ್ಬರ್ಗ | ಜೇವರ್ಗಿ | 200000 | | | | | | |
| **110** | **ಯಾದಗಿರಿ** | **ಸೇಡಂ** | 200000 | 4 | 800000 | | 225000 | 5000 | 1030000 |
| 111 | ಯಾದಗಿರಿ | ಶಹಾಪುರ | 200000 | | | 75000 | | | |
| 112 | ಯಾದಗಿರಿ | ಶೋರಪುರ | 200000 | | | 75000 | | | |
| 113 | ಯಾದಗಿರಿ | ಯಾದಗಿರಿ | 200000 | | | 75000 | | | |
| **114** | **ಹಾಸನ** | **ಸಕಲೇಶ್ ಪುರ** | 200000 | 8 | 1600000 | | | 5000 | 1605000 |
| 115 | ಹಾಸನ | ಬೇಲೂರು | 200000 | | | | | | |
| 116 | ಹಾಸನ | ಅರಸೀಕೆರೆ | 200000 | | | | | | |
| 117 | ಹಾಸನ | ಹಾಸನ | 200000 | | | | | | |
| 118 | ಹಾಸನ | ಆಲೂರು | 200000 | | | | | | |
| 119 | ಹಾಸನ | ಅರಕಲಗೂಡು | 200000 | | | | | | |
| 120 | ಹಾಸನ | ಹೊಳೇನರಸೀಪುರ | 200000 | | | | | | |
| 121 | ಹಾಸನ | ಚನ್ನರಾಯಪಟ್ಟಣ | 200000 | | | | | | |

| | | | | | | | | | |
|---|---|---|---|---|---|---|---|---|---|
| **122** | **ಹಾವೇರಿ** | **ಬ್ಯಾಡಗಿ** | 200000 | 7 | 1400000 | | | 5000 | 1405000 |
| 123 | ಹಾವೇರಿ | ಹಾನಗಲ್ಲು | 200000 | | | | | | |
| 124 | ಹಾವೇರಿ | ಹಾವೇರಿ | 200000 | | | | | | |
| 125 | ಹಾವೇರಿ | ಹಿರೇಕೆರೂರು | 200000 | | | | | | |
| 126 | ಹಾವೇರಿ | ರಾಣಿಬೆನ್ನೂರು | 200000 | | | | | | |
| 127 | ಹಾವೇರಿ | ಸವನೂರು | 200000 | | | | | | |
| 128 | ಹಾವೇರಿ | ಶಿಗ್ಗೊಂವ್ | 200000 | | | | | | |
| **129** | **ಕೊಡಗು** | **ಮಡಿಕೇರಿ** | 200000 | 3 | 600000 | | | 5000 | 605000 |
| 130 | ಕೊಡಗು | ಸೋಮವಾರಪೇಟೆ | 200000 | | | | | | |
| 131 | ಕೊಡಗು | ವೀರಾಜಪೇಟೆ | 200000 | | | | | | |
| **132** | **ಕೋಲಾರ** | **ಬಂಗಾರಪೇಟೆ** | 200000 | 6 | 1200000 | | 75000 | 5000 | 1280000 |
| 133 | ಕೋಲಾರ | ಕೋಲಾರ | 200000 | | | 75000 | | | |
| 134 | ಕೋಲಾರ | ಕೆ.ಜಿ.ಎಫ್ | 200000 | | | | | | |
| 135 | ಕೋಲಾರ | ಮಾಲೂರು | 200000 | | | | | | |
| 136 | ಕೋಲಾರ | ಮುಳಬಾಗಿಲು | 200000 | | | | | | |
| 137 | ಕೋಲಾರ | ಶ್ರೀನಿವಾಸಪುರ | 200000 | | | | | | |
| **138** | **ಚಿಕ್ಕಬಳ್ಳಾಪುರ** | **ಬಾಗೇಪಲ್ಲಿ** | 200000 | 6 | 1200000 | | 150000 | 5000 | 1355000 |
| 139 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 200000 | | | | | | |
| 140 | ಚಿಕ್ಕಬಳ್ಳಾಪುರ | ಚಿಂತಾಮಣಿ | 200000 | | | 75000 | | | |
| 141 | ಚಿಕ್ಕಬಳ್ಳಾಪುರ | ಗೌರಿಬಿದನೂರು | 200000 | | | 75000 | | | |
| 142 | ಚಿಕ್ಕಬಳ್ಳಾಪುರ | ಗುಡಿಬಂಡೆ | 200000 | | | | | | |
| 143 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | 200000 | | | | | | |

| | | | | | | | | | |
|---|---|---|---|---|---|---|---|---|---|
| 144 | **ಕೊಪ್ಪಳ** | **ಗಂಗಾವತಿ** | 200000 | 4 | 800000 | 75000 | 150000 | 5000 | 955000 |
| 145 | ಕೊಪ್ಪಳ | ಕೊಪ್ಪಳ | 200000 | | | 75000 | | | |
| 146 | ಕೊಪ್ಪಳ | ಕುಷ್ಟಗಿ | 200000 | | | | | | |
| 147 | ಕೊಪ್ಪಳ | ಯಲ್ಬುರ್ಗ | 200000 | | | | | | |
| 148 | **ಮಂಡ್ಯ** | **ಕೃಷ್ಣರಾಜಪೇಟೆ** | 200000 | 8 | 1600000 | | | 5000 | 1605000 |
| 149 | ಮಂಡ್ಯ | ಮದ್ದೂರು | 200000 | | | | | | |
| 150 | ಮಂಡ್ಯ | ಮಳವಳ್ಳಿ | 200000 | | | | | | |
| 151 | ಮಂಡ್ಯ | ಮಂಡ್ಯ ಉತ್ತರ | 200000 | | | | | | |
| 152 | ಮಂಡ್ಯ | ಮಂಡ್ಯದಕ್ಷಿಣ | 200000 | | | | | | |
| 153 | ಮಂಡ್ಯ | ನಾಗಮಂಗಲ | 200000 | | | | | | |
| 154 | ಮಂಡ್ಯ | ಪಾಂಡವಪುರ | 200000 | | | | | | |
| 155 | ಮಂಡ್ಯ | ಶ್ರೀರಂಗಪಟ್ಟಣ | 200000 | | | | | | |
| 156 | **ಮೈಸೂರು** | **ಹೆಚ್.ಡಿ.ಕೋಟೆ** | 200000 | 9 | 1800000 | 75000 | 300000 | 5000 | 2105000 |
| 157 | ಮೈಸೂರು | ಹುಣಸೂರು | 200000 | | | | | | |
| 158 | ಮೈಸೂರು | ಕೆ.ಆರ್.ನಗರ | 200000 | | | | | | |
| 159 | ಮೈಸೂರು | ಮೈಸೂರು ಉತ್ತರ | 200000 | | | | | | |
| 160 | ಮೈಸೂರು | ಮೈಸೂರು ದಕ್ಷಿಣ | 200000 | | | | | | |
| 161 | ಮೈಸೂರು | ಮೈಸೂರು ಗ್ರಾಮಾಂತರ | 200000 | | | 75000 | | | |
| 162 | ಮೈಸೂರು | ನಂಜನಗೂಡು | 200000 | | | 75000 | | | |
| 163 | ಮೈಸೂರು | ಪಿರಿಯಾಪಟ್ಟಣ | 200000 | | | | | | |
| 164 | ಮೈಸೂರು | ಟಿ.ನರಸೀಪುರ | 200000 | | | 75000 | | | |
| 165 | **ರಾಯಚೂರು** | **ದೇವದುರ್ಗ** | 200000 | 5 | 1000000 | 75000 | 375000 | 5000 | 1380000 |
| 166 | ರಾಯಚೂರು | ಲಿಂಗಸುಗೂರು | 200000 | | | 75000 | | | |
| 167 | ರಾಯಚೂರು | ಮಾನ್ವಿ | 200000 | | | 75000 | | | |
| 168 | ರಾಯಚೂರು | ರಾಯಚೂರು | 200000 | | | 75000 | | | |
| 169 | ರಾಯಚೂರು | ಸಿಂದನೂರು | 200000 | | | 75000 | | | |

| | | | | | | | | | |
|---|---|---|---|---|---|---|---|---|---|
| 170 | **ಶಿವಮೊಗ್ಗ** | **ಭದ್ರಾವತಿ** | 200000 | 7 | 1400000 | | | 5000 | 1405000 |
| 171 | ಶಿವಮೊಗ್ಗ | ಹೊಸನಗರ | 200000 | | | | | | |
| 172 | ಶಿವಮೊಗ್ಗ | ಸಾಗರ | 200000 | | | | | | |
| 173 | ಶಿವಮೊಗ್ಗ | ಶಿಕಾರಿಪುರ | 200000 | | | | | | |
| 174 | ಶಿವಮೊಗ್ಗ | ಶಿವಮೊಗ್ಗ | 200000 | | | | | | |
| 175 | ಶಿವಮೊಗ್ಗ | ಸೊರಬ | 200000 | | | | | | |
| 176 | ಶಿವಮೊಗ್ಗ | ತೀರ್ಥಹಳ್ಳಿ | 200000 | | | | | | |
| 177 | **ತುಮಕೂರು** | **ತುಮಕೂರು** | 200000 | 6 | 1200000 | 75000 | 75000 | 5000 | 1280000 |
| 178 | ತುಮಕೂರು | ತಿಪಟೂರು | 200000 | | | | | | |
| 179 | ತುಮಕೂರು | ಚಿಕ್ಕನಾಯಕನಹಳ್ಳಿ | 200000 | | | | | | |
| 180 | ತುಮಕೂರು | ತುರುವೇಕೆರೆ | 200000 | | | | | | |
| 181 | ತುಮಕೂರು | ಕುಣಿಗಲ್ | 200000 | | | | | | |
| 182 | ತುಮಕೂರು | ಗುಬ್ಬಿ | 200000 | | | | | | |
| 183 | **ಮಧುಗಿರಿ** | **ಮಧುಗಿರಿ** | 200000 | 4 | 800000 | | 150000 | | 950000 |
| 184 | ಮಧುಗಿರಿ | ಪಾವಗಡ | 200000 | | | 75000 | | | |
| 185 | ಮಧುಗಿರಿ | ಸಿರಾ | 200000 | | | 75000 | | | |
| 186 | ಮಧುಗಿರಿ | ಕೊರಟಗೆರೆ | 200000 | | | | | | |
| 187 | **ಉಡುಪಿ** | **ಕುಂದಾಪುರ** | 200000 | 5 | 1000000 | | | 5000 | 1005000 |
| 188 | ಉಡುಪಿ | ಬೈಂದೂರು | 200000 | | | | | | |
| 189 | ಉಡುಪಿ | ಬ್ರಹ್ಮಾವರ | 200000 | | | | | | |
| 190 | ಉಡುಪಿ | ಉಡುಪಿ | 200000 | | | | | | |
| 191 | ಉಡುಪಿ | ಕಾರ್ಕಳ | 200000 | | | | | | |

| | | | | | | | | | |
|---|---|---|---|---|---|---|---|---|---|
| 192 | ಉತ್ತರ ಕನ್ನಡ | ಅಂಕೋಲ | 200000 | 11 | 2200000 | | | 5000 | 2205000 |
| 193 | ಉತ್ತರ ಕನ್ನಡ | ಭಟ್ಕಳ | 200000 | | | | | | |
| 194 | ಉತ್ತರ ಕನ್ನಡ | ಹಳಿಯಾಳ | 200000 | | | | | | |
| 195 | ಉತ್ತರ ಕನ್ನಡ | ಹೊನ್ನಾವರ | 200000 | | | | | | |
| 196 | ಉತ್ತರ ಕನ್ನಡ | ಜೊಯ್ಡಾ (ಸೂಪ) | 200000 | | | | | | |
| 197 | ಉತ್ತರ ಕನ್ನಡ | ಕಾರವಾರ | 200000 | | | | | | |
| 198 | ಉತ್ತರ ಕನ್ನಡ | ಕುಮಟ | 200000 | | | | | | |
| 199 | ಉತ್ತರ ಕನ್ನಡ | ಮುಂಡಗೋಡು | 200000 | | | | | | |
| 200 | ಉತ್ತರ ಕನ್ನಡ | ಸಿದ್ದಾಪುರ | 200000 | | | | | | |
| 201 | ಉತ್ತರ ಕನ್ನಡ | ಸಿರಸಿ | 200000 | | | | | | |
| 202 | ಉತ್ತರ ಕನ್ನಡ | ಯಲ್ಲಾಪುರ | 200000 | | | | | | |
| | | ಒಟ್ಟು | | | 40400000 | 2850000 | 2850000 | 150000 | 43400000 |